ಮಾಡಿಕೊಳ್ಳುತ್ತಿದ್ದೇನೆ. ಆ ಕಲುಷಿತ ನೀರನ್ನು ಕುಡಿಯುವ ಪರಿಸ್ಥಿತಿ ನಮಗೆ ಬಂದಿದೆ. Underground drainage system ಆಗಲಿಲ್ಲವೆಂದರೆ ಊರಿನಲ್ಲಿ ರೋಗ ರುಜಿನಗಳು ಹರಡುತ್ತವೆ. ನಮಗೆ ಕುಡಿಯುವ ನೀರಿನ ಸಮಸ್ಯೆಯಾಗುತ್ತಿದೆ. ನಿರ್ದಿಷ್ಟವಾಗಿ ನಮಗೆ ಮಾಡಿಕೊಡುತ್ತೇನೆ ಎನ್ನುವ ಭರವಸೆಯನ್ನು ನಾನು ತಮ್ಮಿಂದ ಕೇಳುತ್ತಿದ್ದೇನೆ. ಮೂರು ವರ್ಷದಿಂದ ಇಲಾಖೆಗೆ ಎಡತಾಕುತ್ತಿದ್ದೇವೆ. ಯಾರೂ ಕ್ರಮ ತೆಗೆದುಕೊಳ್ಳುತ್ತಿಲ್ಲ.

ಅಧ್ಯಕ್ಷರು :– ಎಷ್ಟು ಸಲ ಹೇಳುತ್ತೀರಿ, ಎಷ್ಟು ಹೊತ್ತಾಯಿತು.

ಶ್ರೀ ಮಾಮನಿ ವಿಶ್ವನಾಥ್ ಕರಬಸಪ್ಪ :– ನಮ್ಮದೇನೂ ಇಲ್ಲ ಸಾರ್. ನಿರ್ದಿಷ್ಟವಾಗಿ ಮಾಡಿಕೊಡುತ್ತೇನೆಂದು ಹೇಳಿದರೆ ನಾನು ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು :– ಪ್ರಶ್ನೋತ್ತರ ವೇಳೆಯಲ್ಲಿ ನೀವು ಎಲ್ಲಾ ಕೇಳಿಕೊಂಡು ಕುಳಿತುಕೊಳ್ಳುವುದಕ್ಕಾಗುತ್ತದೆಯೇ? Is Such the way should frame the questions?

ಶ್ರೀ ಆರ್. ಶ್ರೀನಿವಾಸ್ :– UIDCSFT ನಿಂದ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಹೋಗಿದೆ. ಅನುಮತಿ ಬಂದ ತಕ್ಷಣ ಟೆಂಡರ್ ಕರೆದು ಪ್ರಾರಂಭ ಮಾಡುವುದಕ್ಕೆ ನಾನು ಆಶ್ವಾಸನೆ ಕೊಡುತ್ತೇನೆಂದು ತಮ್ಮ ಮೂಲಕ ಹೇಳಬಯಸುತ್ತೇನೆ.

ಚಿಟಗುಪ್ಪಾದಲ್ಲಿ ಬಸ್ ನಿಲ್ದಾಣ ಪ್ರಾರಂಭ

676 ಶ್ರೀ ಮೀರಾಜುದ್ದೀನ್ ಪಟೇಲ್ (ಹುಮನಾಬಾದ್) :– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಹುಮನಾಬಾದ್ ತಾಲ್ಲೂಕಿನ ಚಿಟಗುಪ್ಪಾದಲ್ಲಿ ಹೊಸ ಬಸ್ ನಿಲ್ದಾಣವನ್ನು ಪ್ರಾರಂಭ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ಕಾಮಗಾರಿ ಕೆಲಸವನ್ನು ಪ್ರಾರಂಭ ಮಾಡಲಾಗುವುದು, ಯಾವಾಗ ಪೂರ್ಣ ಗೊಳಿಸಲಾಗುವುದು;

ಇ) ಇದಕ್ಕೆ ತಗಲುವ ಅಂದಾಜು ಮೊಬಲಗವೆಷ್ಟು ?

ಶ್ರೀ ಎನ್. ಚೆಲುವರಾಯಸ್ವಾಮಿ (ಸಾರಿಗೆ ಸಚಿವರು) :

ಅ) ಪ್ರಸ್ತುತ ಚಿಟಗುಪ್ಪಾದಲ್ಲಿ ಸಂಸ್ಥೆಯ ಬಸ್ ನಿಲ್ದಾಣ ಇರುವುದರಿಂದ ಹೊಸ ಬಸ್ ನಿಲ್ದಾಣ ನಿರ್ಮಿಸುವ ಪ್ರಸ್ತಾವನೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಮಿರಾಜುದ್ದೀನ್ ಪಟೇಲ್ :– ನನ್ನ ಪ್ರಶ್ನೆ ಏನಿದೆ ಎಂದರೆ, ಹುಮನಾಬಾದ್ ಬಸ್ ನಿಲ್ದಾಣದ ದುರಸ್ತಿಯ ಬಗ್ಗೆ ಮತ್ತು ಚಿಟಗುಪ್ಪಾದಲ್ಲಿ ಹೊಸ ಬಸ್ ನಿಲ್ದಾಣವನ್ನು ಪ್ರಾರಂಭಿಸುವ ಬಗ್ಗೆ ನಾನು ಕೇಳಿದ್ದೇನೆ. ಆದರೆ, ಇವರ ಉತ್ತರ ಏನೆಂದರೆ, ಬರಿ ಚಿಟಗುಪ್ಪಾದಲ್ಲಿ ಸಂಸ್ಥೆಯ ಬಸ್‌ನಿಲ್ದಾಣ ಇರುವುದರಿಂದ ಹೊಸ ಬಸ್ ನಿಲ್ದಾಣ ನಿರ್ಮಿಸುವ ಹೊಸ ಪ್ರಸ್ತಾವನೆ ಇಲ್ಲವೆಂದು ಉತ್ತರ ಕೊಟ್ಟಿದ್ದಾರೆ. ನಾನು ಕೇಳುವುದು ಎಂದರೆ, ಹುಮನಾಬಾದ್ ಬಸ್ ನಿಲ್ದಾಣ ಸಂಪೂರ್ಣವಾಗಿ wrost ಆಗಿದೆ. ಅದು ರಾಹೆ 9 ನಲ್ಲಿ ಬರುತ್ತದೆ. ಅಲ್ಲಿ ಬರುವುದು ಹೋಗುವುದು ಬಹಳ ಟ್ರಾಫಿಕ್ ಇದೆ. ಅಲ್ಲಿರುವ ಬಸ್‌ಸ್ಟ್ಯಾಂಡ್ ಸಂಪೂರ್ಣವಾಗಿ ಹಾಳಾಗಿ ಹೋಗಿದೆ. ಇದರ ದುರಸ್ತಿಯ ಬಗ್ಗೆ ನಾನು ಕೇಳುತ್ತಿದ್ದೇನೆ. ಈಗಾಗಲೇ ಅಲ್ಲಿ ಏನಾಗಿದೆ ಎಂದರೆ, ನಾನು ಎಂ.ಡಿ. ಗೆ ಸಂಪರ್ಕಿಸಿದರೆ, ಅದರ ಟೆಂಡರ್ ಕರೆದಿದೆ, ಆದರೆ ನಮಗೆ ಅದರ estimates cost ಎಷ್ಟು ಬೇಕೋ ಅಷ್ಟು ಹಣ ನಮ್ಮ ಹತ್ತಿರ availability ಇಲ್ಲವೆಂದು ಹೇಳಿದ್ದರಿಂದ ನಾನು ಇಲ್ಲಿ ಪ್ರಶ್ನೆ ಕೇಳಿದೆ. ಆದರೆ ನನ್ನ ಪ್ರಶ್ನೆಗೆ ಉತ್ತರ ಸಿಗಲಿಲ್ಲ.

ಶ್ರೀ ಎನ್. ಚೆಲುವರಾಯಸ್ವಾಮಿ :– ಹುಮನಾಬಾದ್ ತಾಲ್ಲೂಕು ಕೇಂದ್ರದಲ್ಲಿ ಬಸ್ ನಿಲ್ದಾಣವನ್ನು ಕೇಳಿದ್ದಾರೆ. ಅದು ಉತ್ತರದಲ್ಲಿ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಅವರು ಪ್ರಶ್ನೆ ಕೇಳಿರುವುದು, ಚಿಟಗುಪ್ಪಾದಲ್ಲಿ ಬಸ್ ನಿಲ್ದಾಣವನ್ನು ಕೇಳಿದ್ದಾರೆ. ಚಿಟಗುಪ್ಪಾದಲ್ಲಿ ಬಸ್ ನಿಲ್ದಾಣ ಈಗಾಗಲೇ ಇದೆ. ಆದರೆ, ಅದನ್ನು ಇನ್ನು ದೊಡ್ಡ ಪ್ರಮಾಣದಲ್ಲಿ ಬಸ್ ನಿಲ್ದಾಣ ಬೇಕು, ಏಕೆಂದರೆ, ಅದು ಹೋಬಳಿ ಕೇಂದ್ರ, ಹೆಚ್ಚಿನ ಜನಸಂಖ್ಯೆ ಇದೆ, ಆದ್ದರಿಂದ ಅಲ್ಲಿ ಬೇಕೆಂದು ಕೇಳಿದ್ದಾರೆ. ನಮಗೆ ಈಗಾಗಲೇ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಹೆಚ್ಚಿನ ಬೇಡಿಕೆ ಇರುವುದರಿಂದ ಹುಮನಾಬಾದ್‌ನಲ್ಲಿ ಎರಡೂವರೆ ಕೋಟಿ ವೆಚ್ಚದಲ್ಲಿ ಟೆಂಡರ್ ಕರೆದು ಏಜೆನ್ಸಿ ಫಿಕ್ಸ್ ಆಗಿದೆ. ನಾನು ಈ ದಿವಸ ಎಂ.ಡಿ ಹತ್ತಿರ ಮಾತನಾಡಿದ್ದೇನೆ. ಅವರು ಯಾವಾಗ ಹೇಳುತ್ತಾರೆ ಆವತ್ತು ಪೂಜೆ ಮಾಡಿ ಕೆಲಸ ಪ್ರಾರಂಭಿಸುವುದರಲ್ಲಿ ಅಭ್ಯಂತರವಿಲ್ಲ. ಈ ಹಣ ಪೂರ್ತಿಯಾಗಿ ಒದಗಿಸಲಾಗಿದೆ. ಚಿಟಗುಪ್ಪಾದಲ್ಲಿ ಮುಂದಿನ ದಿನಗಳಲ್ಲಿ ಆದ್ಯತೆಯ ಮೇಲೆ ತೆಗೆದುಕೊಳ್ಳಲಾಗುವುದು.

ಶ್ರೀ ಮಿರಾಜುದ್ದೀನ್ ಪಟೇಲ್ :- ಹುಮನಾಬಾದ್‌ನಲ್ಲಿ ಬೇಗ ವರ್ಕ್‌ಸ್ಟಾರ್ಟ್ ಮಾಡಲಿಕ್ಕೆ ತಾವು ಸೂಚನೆ ಕೊಡಬೇಕು, ವರ್ಕ್‌ಸ್ಟಾರ್ಟ್ ಮಾಡಲಿಕ್ಕೆ ಒಂದು ದಿವಸ ಪ್ರೋಗ್ರಾಂ ಇಟ್ಟು ಅದರ ದಿನಾಂಕವನ್ನು ನಿಗದಿಪಡಿಸಿ ತಮಗೆ ತಿಳಿಸುತ್ತೇವೆ. ಅದಕ್ಕೆ ತಾವು ಒಂದು ಆಶ್ವಾಸನೆ ಕೊಡಬೇಕು.

ಶ್ರೀ ಎನ್. ಚೆಲುವರಾಯಸ್ವಾಮಿ :- ತಾವು ಯಾವತ್ತು ಹೇಳುತ್ತೀರೋ ಆ ದಿವಸ ಪೂಜೆ ಮಾಡಿ ಕೆಲಸ ಆರಂಭಿಸಬಹುದು.

<u>ಬೂದಿಕೋಟೆ ಗ್ರಾಮವನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿ ಪಡಿಸುವುದು.</u>

99 (973) ಶ್ರೀ ವೆಂಕಟಮುನಿಯಪ್ಪ ಬಿ.ಪಿ. (ಬೇತಮಂಗಲ) :- ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತಿಹಾಸ ಪುರುಷ ಹೈದರಾಲಿ ಜನ್ಮಸ್ಥಳವಾಗ ಬಂಗಾರಪೇಟೆ ತಾಲ್ಲೂಕು ಬೂದೀಕೋಟೆ ಗ್ರಾಮವನ್ನು ಪ್ರವಾಸಿ ತಾಣವನ್ನಾಗಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ ಯಾವಾಗ ಕ್ರಮ ಕೈಗೊಳ್ಳಲಾಗುವುದು;

ಇ) ಹಾಗಿಲ್ಲದಿದ್ದಲ್ಲಿ, ಕೋಟೆ-ಕೊತ್ತಲು, ಮಾರ್ಕಂಡೆಯ ಜಲಾಶಯಗಳನ್ನೊಳಗೊಂಡ ಈ ಗ್ರಾಮವನ್ನು ಪ್ರವಾಸಿ ತಾಣವಾಗಿಸಲು ಸರ್ಕಾರದ ಅನಾನುಕೂಲಗಳೇನು?

ಶ್ರೀ ಬಿ. ಶ್ರೀ ರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಸಚಿವರು):

ಅ) ಪ್ರಸ್ತುತ ಈ ಬಗ್ಗೆ ಯಾವುದೇ ಪ್ರಸ್ತಾವನೆ ಇಲಾಖೆಯ ಮುಂದೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ

ಇ) ಬಂಗಾರುಪೇಟೆಯಿಂದ 15 ಕಿ.ಮೀ ದೂರದಲ್ಲಿರು ಈ ಬೂದಿಕೋಟೆ ಗ್ರಾಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡುತ್ತಿಲ್ಲ ಇಲ್ಲಿಗೆ ಸರಿಯಾದ ರಸ್ತೆ ಸೌಲಭ್ಯ ಇರುವುದಿಲ್ಲ ಹಾಗೂ ವೀಕ್ಷಿಸಲು ಆಕರ್ಷಕ ಸ್ಮಾರಕರಗಳು ಇರುವುದಿಲ್ಲ. ಮಾರ್ಕಂಡೇಯ ಜಲಾಶಯವು ಬೂದಿಕೋಟೆಯಿಂದ 4 ಕಿ.ಮೀ ದೂರದಲ್ಲಿದ್ದು ಇಲ್ಲಿಗೂ ರಸ್ತೆ ಸಂಪರ್ಕ ಸರಿಯಾಗಿರುವುದಿಲ್ಲ. ಹಾಗಾಗಿ ಪ್ರವಾಸಿಗರ ಸಂಖ್ಯೆಯು ಗಣನೀಯವಾಗಿರುವುದಿಲ್ಲ.